# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1321(1638)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಬಿ.ಎಂ.ಆರ್.ಸಿ.ಎಲ್ ಸಿಬ್ಬಂದಿ ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿರುವ ಬಗ್ಗೆ

(ಅ) ಬೆಂಗಳೂರು ಮೆಟ್ರೋ ರೈಲು ನಿಗಮವು 174 ಹೊಸ ಹುದ್ದೆಗಳನ್ನು ತುಂಬಲು ನೇಮಕಾತಿಗಾಗಿ ಯಾವಾಗ ಅಧಿಸೂಚನೆ ಹೊರಡಿಸಲಾಯಿತು; ಅಂತಿಮ ಆಯ್ಕೆ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಯಿತು; (ಅಧಿಸೂಚನೆ ಮತ್ತು ಆಯ್ಕೆ ಪಟ್ಟಿಯ ಪ್ರತಿಯೊಂದಿಗೆ ಮಾಹಿತಿ ನೀಡುವುದು)

(ಆ) ಸದರಿ ಆಯ್ಕೆ ಪಟ್ಟಿಯಡಿ ಆಯ್ಕೆಗೊಂಡ ಅಭ್ಯರ್ಥಿಗಳು ಯಾರು ಯಾರು; (ಅಭ್ಯರ್ಥಿ ಹೆಸರು, ಆಯ್ಕೆಗೊಂಡ ಹುದ್ದೆಯ ಪದನಾಮ ಮತ್ತು ಅಭ್ಯರ್ಥಿಯ ದೂರವಾಣಿ ಸಂಖ್ಯೆ ಮತ್ತು ವಿಳಾಸದೊಂದಿಗೆ ವಿವರವಾದ ಮಾಹಿತಿ ಒದಗಿಸುವುದು )

(ಇ) ಸದರಿ ಆಯ್ಕೆ ಪಟ್ಟಿಯನ್ನು ನಿಗಮವು ರದ್ದುಗೊಳಿಸಿರುವುದು ನಿಜವೇ; ಹಾಗಾದಲ್ಲಿ, ರದ್ದುಗೊಳಿಸಲು ಕಾರಣಗಳೇನು;

(ಈ) ಈ ಹುದ್ದೆಗಳನ್ನು ಹೊರಗುತ್ತಿಗೆಯಡಿ ತುಂಬಲು ಚಿಂತಿಸಿರುವುದು ನಿಜವೇ; ಹಾಗಾದರೆ, ಹೊರಗುತ್ತಿಗೆಯಡಿ ತೆಗೆದುಕೊಳ್ಳಲು ಕಾರಣಗಳೇನು;

(ಉ) ಸರ್ಕಾರವು ಹೊರಗುತ್ತಿಗೆ ನೇಮಕದ ಪ್ರಸ್ತಾವವನ್ನು ತಿರಸ್ಕರಿಸಿ ಈಗಾಗಲೇ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಇರುವ ತೊಂದರೆಗಳೇನು; (ವಿವರ ನೀಡುವುದು)

(ಊ) ಯಾವ ಕಾಲಮಿತಿಯಲ್ಲಿ ಸರ್ಕಾರವು ನೇಮಕಾತಿ ಆದೇಶ ನೀಡಲು ನಿರ್ದೇಶನ ನೀಡಲಾಗುವುದು?